**<u>ಪ್ರಧಾನ ಸಿವಿಲ್ ನ್ಯಾಯಾದೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ ಅರಸೀಕೆರೆ.</u>**

***<u>ಸಿ.ಸಿ.ನಂ.528/2021</u>***

ಪಿರ್ಯಾದಿದಾರರು : ಆರ್.ಎಸ್. ಸಿದ್ದಪ್ಪ ಬಿನ್ ಶಿವರುದ್ರಪ್ಪ,
42 ವರ್ಷ,
ವಾಸ : ರಾಮನಹಳ್ಳಿ ಗ್ರಾಮ,
ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು.

:ವಿರುದ್ದ:

ಆರೋಪಿತರು : ಹೆಚ್.ಕೆ. ಶಿವಣ್ಣ ಬಿನ್ ಕರಿಯಪ್ಪ,
42 ವರ್ಷ,
ವಾಸ : ಹೊಸಪಟ್ಟಣ ಗ್ರಾಮ,
ಹೊನ್ನವಳ್ಳಿ ಅಂಚೆ, ತಿಪಟೂರು ತಾಲ್ಲೂಕು.

ಶ್ರೀಮತಿ. ರಮ್ಯ ಹೆಚ್.ಆರ್, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಸೀಕೆರೆ, ಆದ ನಾನು ಈ ಮೂಲಕ ಆರೋಪಿತರಾದ ವಿರುದ್ದ ಮಾಡುವ ಆಪಾದನೆ ಏನೆಂದರೆ

## <u>ಆಪಾದನೆ</u>

ದಿನಾಂಕ 20.04.2015 ರಂದು ಆರೋಪಿಯಾದ ನೀವು ಪಿರ್ಯಾದಿದಾರರಿಂದ ರೂ.1,70,000/- ಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಹಣವನ್ನು 1 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಹೇಳಿದ್ದು, ನಂತರ 1 ತಿಂಗಳಾದ ಮೇಲೆ ಪಿರ್ಯಾದಿದಾರರು ತಮ್ಮನ್ನು ಸಂಪರ್ಕಿಸಿ ಸದರಿ ಸಾಲದ ಹಣವನ್ನು ಹಿಂದಿರುಗಿಸುವಂತೆ ಕೇಳಿದಾಗ ಆರೋಪಿಯಾದ ನೀವು ಸದರಿ ಸಾಲದ ಹಣದ ಮರುಪಾವತಿಗಾಗಿ ನಿಮ್ಮ ಕರ್ನಾಟಕ ಬ್ಯಾಂಕ್, ಹೊನ್ನವಳ್ಳಿ ಶಾಖೆಯ, ಚೆಕ್ ನಂಬರ್ 233539 ಅನ್ನು ದಿನಾಂಕ 25.05.2015 ಎಂದು ನಮೂದು ಮಾಡಿ ಕೊಟ್ಟಿದ್ದು, ಸದರಿ ಚೆಕ್ಕನ್ನು ಪಿರ್ಯಾದಿದಾರರು ತಮ್ಮ ಬ್ಯಾಂಕ್ ಖಾತೆ ಹೊಂದಿರುವ ಎಕ್ಸಿಸ್ ಬ್ಯಾಂಕ್, ಅರಸೀಕೆರೆ ಶಾಖೆಗೆ ಹಾಜರು ಮಾಡಿದಾಗ ಸದರಿ ಚೆಕ್ ಫಂಡ್ಸ್ ಇನ್‌ಸಫಿಷಿಯೆಂಟ್ ಎಂಬ ಷರಾದೊಂದಿಗೆ ದಿನಾಂಕ : 28-05-2015 ರಂದು ವಾಪಸ್ಸು ಬಂದಿರುತ್ತದೆ, ಸದರಿ ವಿಚಾರದ ಬಗ್ಗೆ ಪಿರ್ಯಾದುದಾರರು ನಿಮಗೆ ತಮ್ಮ ವಕೀಲರ ಮೂಲಕ ದಿನಾಂಕ : 03-06-2015 ರಂದು ನೋಂದಣಿ ಅಂಚೆ ಮೂಲಕ ನೋಟೀಸ್ ಕಳಹಿಸಿದ್ದು ಸದರೀ ನೋಟಿಸ್ಸನ್ನು ನೀವು ಪಡೆಯದೇ ರೆಫ್ಯಾಸ್ ಟು ಸೆಂಡರ್ ಎಂಬ ಷರಾದೊಂದಿಗೆ ವಾಪಸ್ಸ ಬಂದಿದ್ದು, ಆರೋಪಿಯಾದ ನೀವು ಅಪರಾದ ಮಾಡುವ

ಉದ್ದೇಶದಿಂದ ಚೆಕ್ ನಗದಾಗುವಷ್ಟು ಹಣವನ್ನು ನಿಮ್ಮ ಖಾತೆಯಲ್ಲಿ ಇಡದೇ ನೆಗೋಷಿಯೆಬಲ್ ಇನ್ಸ್ಟ್ರುಮೆಂಟ್ ಕಾಯ್ದೆ ಕಲಂ.138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುತ್ತಿರಿ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಮೇಲೆ ಹೇಳಿದಂತಹ ಆಪಾದನೆಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗ ತಕ್ಕದ್ದು ಅಂಥ ಈ ಮೂಲಕ ಆದೇಶ ಮಾಡಿರುತ್ತೇನೆ.

ಪ್ರಶ್ನೆಃ- ಈಗ ಓದಿ ಹೇಳಿದ ಆಪಾದನೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?
ಉತ್ತರಃ-

ಪ್ರಶ್ನೆಃ- ಮೇಲೆ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?
ಉತ್ತರಃ-

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಡೀಕರಿಸುತ್ತೇನೆ.)

ದಿನಾಂಕಃ 12.08.2022.
ಸ್ಥಳಃ ಅರಸೀಕೆರೆ.

(ಶ್ರೀಮತಿ ರಮ್ಯ ಹೆಚ್.ಆರ್.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಅರಸೀಕೆರೆ.